ನಿಷೇಧವಿಲ್ಲ ಎನ್ನಲಾಗುತ್ತಿದೆ. ಆದರೆ ಇಳಿಸಿದ ಶೇಂದಿಯನ್ನು ತಮ್ಮ ಮನೆ ಪಕ್ಕದಲ್ಲೋ ಮಂಗಳ ಕೆಳಗಡೆ ಉಪಯೋಗಿಸುವವರಿಗೆ ವಿತರಿಸಬಹುದೇ ? ಇದಕ್ಕೆ ಸರಿಯಾದ ಆದೇಶ ಇಲ್ಲವೇ ಸೂಕ್ತ ಸೂಚನೆಯಾನ್ನು ಅಬಕಾರಿ ಇಲಾಖೆಗೆ ನೀಡಿದೆಯೇ ? ಇಲ್ಲವಾದರೆ ಮೂರ್ತಿದಾರರಿಗೂ ಶೇಂದಿ ಉಪಯೋಗಿಸುವವರಲ್ಲಿ ಇಲಾಖೆ ಕಾನೂನಿನ ಕ್ರಮವನ್ನು ಸಡಿಲಗೊಳಿಸಿ, ಆಜ್ಞೆ ಹೊರಡಿಸುವುದೇ. ಮತ್ತು ಸೂಕ್ತ ಆದೇಶವನ್ನು ನೀಡುವುದೇ ಎಂದು ಸರಕಾರದಿಂದ ತಿಳಿಯ ಬಯಸುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸು ಮತ್ತು ಅಬ್ಕಾರಿ ಸಚಿವರು).—ಮಾನ್ಯ ಅಧ್ಯಕ್ಷರೇ ಕುಶಾಲ ಅವರು ತಂದಿರುವ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ತಮ್ಮ ಅನುಮತಿ ಪಡೆದು ಓದುತ್ತೇನೆ.

ಶೇಂದಿ ಉತ್ತಾರುದಾರರ ಪುನರ್ವಸತಿಯ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಲು ಆರ್ಥಿಕ ಮಂತ್ರಿಗಳು ಆರೋಗ್ಯ ಮಂತ್ರಿಗಳು ಮತ್ತು ಕಾನೂನು ಮಂತ್ರಿಗಳನ್ನು ಒಳಗೊಂಡ ಒಂದು ಸಚಿವ ಸಂಪುಟದ ಸಮಿತಿಯನ್ನು ರಚಿಸಲಾಗಿದೆ.

ಸದರಿ ಸಮಿತಿಯು ದಕ್ಷಿಣ ಕನ್ನಡ ಜಿಲ್ಲೆಯ ಶೇಂದಿ ಉತ್ತಾರುದಾರರ ಪುನರ್ವಸತಿಯ ಬಗೆಗಿನ ಪ್ರಸ್ತಾವನೆಯನ್ನು ಚರ್ಚಿಸಲು ದಿನಾಂಕ ೧೫-೬-೯೦ ಮತ್ತು ೧೫-೬-೯೦ ರಂದು ಸಭೆ ಸೇರಿತ್ತು. ಚರ್ಚೆಯ ಮುಂದುವರೆದಿದ್ದು ದಿನಾಂಕ ೨೦-೬-೯೦ರ ನಂತರ ಪುನಃ ಸಭೆ ಸೇರಲಿದೆ.

ಅನೌಪಚಾರಿಕವಾಗಿ ಎರಡು ಬಾರಿ ನಡೆದ ಚರ್ಚೆಯಲ್ಲಿ ಲೋಕಸಭಾ ಸದಸ್ಯರು ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಆಸ್ಕರ್ ಫರ್ನಾಂಡೀಸ್, ಮತ್ತು ಇತರೆ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಭಾಗವಹಿಸಿದ್ದರು. ಶೀಘ್ರದಲ್ಲೇ ನಿರೀಕ್ಷಿಸಿರುವ ಸದರಿ ಸಚಿವ ಸಂಪುಟದ ಉಪ ಸಮಿತಿಯ ಶಿಫಾರಸ್ಸುಗಳನ್ನು ಗಮನದಲ್ಲಿರಿಸಿಕೊಂಡು ಶೇಂದಿ ಉತ್ತಾರುದಾರರ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರವು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಿದೆ.

೩. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೃದ್ಯಾಪ್ಯ ವೇತನ, ವಿಧವಾ ಮಾಶಾಸನ ಬಟವಾಡೆ ಯಾಗದೇ ಇರುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ಉಳ್ಳಾಲ ಕ್ಷೇತ್ರದಲ್ಲಿ ಅಂಗವಿಕಲರ ವೇತನ, ವೃದ್ದಾಪ್ಯ ವೇತನ, ವಿಧವಾ ಮಾಶಾಸನ ಸುಮಾರು ನಾಲ್ಕೈದು ತಿಂಗಳುಗಳಿಂದ ಬಟವಾಡೆ ಮಾಡುತ್ತಾ ಇಲ್ಲ ಅದ್ದರಿಂದ ಆದನ್ನು ಪಡೆಯುತ್ತಿರುವ ಬಡವರು ಕಂಗಾಲಾಗಿರುತ್ತಾರೆ. ಇದರ ಬಟವಾಡೆ ಅತಿ ಶೀಘ್ರ ಆಗಬೇಕಾಗಿದೆ. ಹಿಂದೆ ಪ್ರತಿ ತಿಂಗಳು ಜನಸಂಪರ್ಕ ಸಭೆ ಮಾಡುತ್ತಿದ್ದರು ಈಗ ನಾಲ್ಕೈದು ತಿಂಗಳುಗಳಿಂದ ಆ ಕಾರ್ಯಕ್ರಮ ನಡೆಯುತ್ತಿಲ್ಲ. ಆದ್ದರಿಂದ ಪ್ರತಿ ತಿಂಗಳೂ ಜನಸಂಪರ್ಕ ಸಭೆ ಮಾಡುವಂತೆ ಅಂಗವಿಕಲರಿಗೆ ವೃದ್ಧರಿಗೆ, ವಿಧವೆಯರಿಗೆ ನೆರವು ನೀಡುವ ವ್ಯವಸ್ಥೆ ಮಾಡುವಂತೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

SRI RAJASHEKARA MURTHY (Minister for Finance).— The delay in payment of Old Age Pension, Pension for Physically Handicapped and Widow Pension was due to delay in the Printing of Money Order Forms supplied by the Government Computer Centre. Required number of Money Order Forms could not be printed as the Computer was out of order. Thus there was some delay in despatch of Money Orders to these pensioners. It has now been attended to and the Pension M.O's are being despatched regularly. In particular, 75% of the Old Age Pension, Pension for Physically Handicapped and Widow Pension pertaining to Ullal area has been despatched, upto May 1990 and the balance will be sent today, Necessary instructions will be issued to the Deputy Commissioner for conducting the mass contact meetings regularly.